


**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿ–ರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷ ಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

# ಬೆಳಕಿನ ಸಂಚಲನ

ಸಂಪುಟ 12, ಸಂಚಿಕೆ 3 ದ್ವೈಮಾಸಿಕ ವಾರ್ತಾಪತ್ರ ಮೇ–ಜೂನ್ 2024

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಆಗಸ್ಟ್ 5, 2012)

**ಅನು: ಮಾಧವಿ ಚಲಪತಿ**

ನಾನು ಖಿನ್ನತೆಗೊಳಗಾದಾಗ ಏನು ಮಾಡಬೇಕು?

ಪ್ರತಿಯೊಬ್ಬರೂ ಒಂದಲ್ಲ ಒಂದು ಸಮಯದಲ್ಲಿ ಖಿನ್ನತೆಗೊಳಗಾಗುತ್ತಾರೆ. ಇದು ನಾವೆಲ್ಲರೂ ಅನುಭವಿಸುವ ಸ್ವಾಭಾವಿಕ ಸ್ಥಿತಿಯಾಗಿದೆ.

ನೀವು ಒಂದು ಕ್ಷಣವಾದರೂ ನಿಜವಾಗಿ ಬೆಳಕನ್ನು ಅನುಭವಿಸಿದರೆ, ನಿಮ್ಮ ಖಿನ್ನತೆಯಿಂದ ಪಾರಾಗುವಿರಿ. ಬೆಳಕನ್ನು ಅನುಭವಿಸಿದ ನಂತರವೂ, ನಾವು ಕಠಿಣ ಸನ್ನಿವೇಶಗಳನ್ನು ಎದುರಿಸಬೇಕಾಗಬಹುದು. ನಾವು ಅವುಗಳನ್ನು ವಿವೇಕದಿಂದ ನಿರ್ವಹಿಸಬೇಕು.

ಜೀವನ ಹೆಣಗಾಟ ಮತ್ತು ಸವಾಲುಗಳಿಂದ ತುಂಬಿದೆ. ನೀವು ಒಂದು ಸಮಸ್ಯೆಯನ್ನು ಬಗೆಹರಿಸುವಲ್ಲಿ ಯಶಸ್ವಿಯಾದರೆ, ಇನ್ನೂ ಅನೇಕ ಸಮಸ್ಯೆಗಳು ಗೋಚರವಾಗಲು ಕಾಯುತ್ತಿರುತ್ತವೆ. ಬೆಳಕನ್ನು ನಿಮ್ಮಲ್ಲಿ ಹೊಂದಿದ್ದರೆ ಯಾವ ಸಮಸ್ಯೆ ಅಥವಾ ವ್ಯಕ್ತಿಯನ್ನಾದರೂ ನಿಭಾಯಿಸಬಹುದು. ಇದೇ ಅತ್ಯುತ್ತಮವಾದ ಮಾರ್ಗ!

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಮಾಧವಿ ಚಲಪತಿ**

ಒಬ್ಬ ಯುವ ಲೈಟ್ ಚಾನೆಲ್ ಒಂದು ಸುಂದರವಾದ ಅನುಭವವನ್ನು ಹಂಚಿಕೊಂಡನು. ಆತ ತನ್ನ ನೆರೆಹೊರೆಯಲ್ಲಿ ಗಲಾಟೆಯಾಗುತ್ತಿದ್ದುದನ್ನು ಕೇಳಿಸಿಕೊಂಡನು. ಎರಡು ಗುಂಪುಗಳು ವಾದವಿವಾದದಲ್ಲಿ ತೊಡಗಿದ್ದನ್ನು ಕಂಡನು. ಅವರು ಒಬ್ಬರ ಮೇಲೊಬ್ಬರು ಕೂಗಾಡುತ್ತಿದ್ದರು. ಇದರಿಂದ ಅವನು ಬಹಳ ವ್ಯಾಕುಲಗೊಂಡನು. ಏನು ಮಾಡಲೂ ತೋಚದೆ ದೇವರನ್ನು ಪ್ರಾರ್ಥಿಸಿ ಸಹಾಯ ಬೇಡಲು ನಿರ್ಧರಿಸಿದನು. ಪ್ರಾರ್ಥನೆ ಮಾಡಿ ಲೈಟ್ ಚಾನಲ್ ಮಾಡಲು ಪ್ರಾರಂಭಿಸಿದನು. ಕೆಲವೇ ನಿಮಿಷಗಳಲ್ಲಿ ಗಲಾಟೆ ನಿಂತಿತು ಮತ್ತು ಹೊರಗೆ ಹೋಗಿ ನೋಡಿದಾಗ ಆ ಎರಡು ಗುಂಪುಗಳು ಗಲಾಟೆಯನ್ನು ನಿಲ್ಲಿಸಿ ಶಾಂತವಾಗಿ ಮಾತುಕತೆ ಮಾಡುತ್ತಿರುವುದನ್ನು ಕಂಡನು!

ಈ ಪ್ರಪಂಚವನ್ನು ಅನೇಕ ಗೊಂದಲಮಯ ಸಮಸ್ಯೆಗಳು ಕಾಡುತ್ತಿವೆ. ನಾವು ಸಹಜವಾಗಿಯೇ ಅಸಹಾಯಕರಾಗಿರುತ್ತೇವೆ. ಆದರೆ ನಾವು ಬೆಳಕನ್ನು ಚಾನಲ್ ಮಾಡಬಹುದು. ಈ ಬೆಳಕು ಜನರಲ್ಲಿ ಮತ್ತು ಜಗತ್ತಿನಲ್ಲಿ ಬದಲಾವಣೆಗಳನ್ನು ತರುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಮಾಧವಿ ಚಲಪತಿ**

ಲೈಟ್ ಚಾನಲಿಂಗ್, ಒಂದು ಸರಳ ಆದರೆ ಶಕ್ತಿಶಾಲಿಯಾದ ತಂತ್ರ. ಗುರೂಜಿ ಕೃಷ್ಣಾನಂದರವರು ಮೇ 18, 2008 ರಂದು ಈ ತಂತ್ರವನ್ನು ಪ್ರಾರಂಭಿಸಿದರು. ಈ ವರ್ಷ, ಗುರೂಜಿಯವರ ಜನ್ಮದಿನವೂ ಆಗಿರುವ ಮೇ 18ರಂದು, ನಾವು 16 ವರ್ಷಗಳನ್ನು ಪೂರೈಸುತ್ತಿದ್ದೇವೆ. ಈ ತಂತ್ರವನ್ನು 30 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಮತ್ತು ವಯಸ್ಕರಿಗೆ ಕಲಿಸಿಕೊಡಲಾಗಿದೆ. ಇದು ಈ ಸಂಚಲನದ ಯಶಸ್ಸಿನ ಪ್ರಮಾಣವನ್ನು ಹೇಳುತ್ತದೆ. ಮುಂದಿನ ವರ್ಷಗಳಲ್ಲಿ ಇನ್ನೂ ಅನೇಕರು ನಮ್ಮನ್ನು ಸೇರುತ್ತಾರೆಂದು ನಾವು ದೃಢವಾಗಿ ನಂಬುತ್ತೇವೆ.

ಲೈಟ್ ಚಾನಲಿಂಗ್ ತಂತ್ರವು ಸಾವಿರಾರು ಮಕ್ಕಳಿಗೆ ಮತ್ತು ವಯಸ್ಕರಿಗೆ ಆಶ್ಚರ್ಯಕರ ಫಲಿತಾಂಶಗಳನ್ನು ತಂದುಕೊಟ್ಟಿದೆ. ಇದು ಅನೇಕರಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಹಾಗೂ ಅವರ ಜೀವನದಲ್ಲಿ ಒಳ್ಳೆಯ ಮಾರ್ಗವನ್ನು ಕಂಡುಕೊಳ್ಳಲು ಸಹಾಯಮಾಡಿದೆ. ನಿಯತವಾದ ಅಭ್ಯಾಸದ ನಂತರ ಅನೇಕರು ಆಳವಾದ ಶಾಂತಿ ಮತ್ತು ಪ್ರೀತಿಯನ್ನು ಅನುಭವಿಸಿದ್ದಾರೆ. ಇದು ಈಗಿನ ಹಾಗೂ ಮುಂದಿನ ಪೀಳಿಗೆಗೆ ಉನ್ನತವಾದ ತಂತ್ರವೆಂದು ನಾನು ಭಾವಿಸುತ್ತೇನೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

**ಅನು: ಕಾಂಚನಲತಾ**

❖ ವಾಸ್ತವಗಳನ್ನು ಒಪ್ಪಿಕೊಳ್ಳಲು ವ್ಯಕ್ತಿಯು ಪ್ರಾಮಾಣಿಕನಾಗಿರಬೇಕು. ವ್ಯಕ್ತಿಯು ಪ್ರಾಮಾಣಿಕನಾಗಿಲ್ಲದಿದ್ದಾಗ, ವಾಸ್ತವಗಳಿಗೆ ಕುರುಡನಾಗುತ್ತಾನೆ.

❖ ಪೂಜೆಯು ದೇವರ ಬಗ್ಗೆ ನಮಗಿರುವ ಪ್ರೀತಿಯನ್ನು ವ್ಯಕ್ತಪಡಿಸುವುದಾಗಿದೆ. ನಾವು ಪೂಜೆ ಮಾಡಿದಾಗ, ಚೈತನ್ಯಗಳನ್ನು ಮತ್ತು ಅನುಗ್ರಹವನ್ನು ಕೂಡ ಪಡೆಯುತ್ತೇವೆ. ನಾವು ಪೂಜೆಗಳನ್ನು ಮಾಡುತ್ತಿರುವವರೆಗೂ ನಮ್ಮ ಮತ್ತು ಭಗವಂತನ ಮಧ್ಯೆ ಅಂತರವಿರುತ್ತದೆ. ಆದರೆ, ನಾವು ಧ್ಯಾನ ಮಾಡಿದಾಗ ಅಂತರವು ಕಣ್ಮರೆಯಾಗುತ್ತದೆ. ನಾವೂ ದೇವರಾಗುತ್ತೇವೆ.

❖ ನಾವು ಪ್ರೀತಿಯನ್ನು ನಿಜವಾಗಿ ಹಾಗೂ ಸಹಜವಾಗಿ, ಯಾವುದೇ ಪ್ರಯಾಸವಿಲ್ಲದೇ, ಸದಾಕಾಲವೂ ಪ್ರಕಟಪಡಿಸಿದಾಗ ನಮ್ಮ ಸಾಧನೆಯು ಸಂಪೂರ್ಣಗೊಳ್ಳುತ್ತದೆ.

❖ ನಾವು ಪರಿಶುದ್ಧತೆಯ ಅತ್ಯುನ್ನತ ಮಟ್ಟವನ್ನು ತಲುಪಿದಾಗ ಹಾಗೂ ಅಹಂಭಾವ ರಹಿತರಾದಾಗ ಮತ್ತು ನಿಜವಾಗಲೂ ವಿನಮ್ರರಾದಾಗ, ನಮ್ಮ ಸಾಧನೆ ಕೊನೆಗೊಳ್ಳುತ್ತದೆ.

❖ ನಾವು ದೈವೇಚ್ಛೆಯೊಂದಿಗೆ ಸಹಜವಾಗಿ ಶ್ರುತಿಗೊಂಡಾಗ, ನಮ್ಮ ಸಾಧನೆಯು ಕೊನೆಗೊಳ್ಳುತ್ತದೆ.

❖ ಯಾವುದೇ ಪ್ರಯತ್ನವಿಲ್ಲದೆ ನಾವು ಸಹಜವಾಗಿ ಸತ್ಯವಾದಿಯಾದಾಗ, ನಮ್ಮ ಸಾಧನೆಯು ಕೊನೆಗೊಳ್ಳುತ್ತದೆ.

❖ ಲೌಕಿಕ ವಿಷಯಗಳಿಗೆ ದೇವರನ್ನು ಬೇಡಿಕೊಳ್ಳುವುದನ್ನು ಅಥವಾ ಪೀಡಿಸುವುದನ್ನು ನಿಲ್ಲಿಸಿದಾಗ, ನಾವು ತೆಗೆದುಕೊಳ್ಳುವ ಪ್ರತಿಯೊಂದು ಉಸಿರೂ ದೇವರ ಅನುಗ್ರಹ ಎನ್ನುವುದನ್ನು ಅರಿತುಕೊಂಡಾಗ, ನಮ್ಮ ಸಾಧನೆಯು ಕೊನೆಗೊಳ್ಳುತ್ತದೆ.

❖ ನಮ್ಮ ಬದುಕಿನಲ್ಲಿ ಬರುವ ವ್ಯಕ್ತಿಗಳನ್ನು ದೇವರ ಕೊಡುಗೆ ಎಂದು ನಾವು ನಿಜವಾಗಿಯೂ ಒಪ್ಪಿಕೊಂಡಾಗ, ನಮ್ಮ ಸಾಧನೆಯು ಕೊನೆಗೊಳ್ಳುತ್ತದೆ.

❖ ಬೇಷರತ್ತಿನ ಪ್ರೀತಿಯಿಂದ ಕೂಡಿದ ಅದ್ಭುತವಾದ ಬುದ್ಧಿಶಕ್ತಿಯೊಂದು ನಮಗಾಗಿ ಇದೆ ಎಂಬುದನ್ನು ಅರಿತುಕೊಂಡಾಗ, ನಾವು ಸಬಲರು ಮತ್ತು ಸುರಕ್ಷಿತರು ಎನ್ನುವ ಭಾವನೆ ಮೂಡುತ್ತದೆ.

❖ ಈ ವಿಶ್ವವು ಹಲವಾರು ವಿಷಯಗಳನ್ನು ನಮಗೆ ನೀಡಲು ಕಾಯುತ್ತಿರುತ್ತದೆ. ಆದರೆ, ನಾವು ಬೇರೆ ಇನ್ನೇನನ್ನೋ ಕೇಳುತ್ತಿರುತ್ತೇವೆ ಏಕೆಂದರೆ ಸಾಮಾನ್ಯವಾಗಿ ನಮಗೆ ಯಾವುದು ಒಳ್ಳೆಯದು ಮತ್ತು ಯಾವುದು ಒಳ್ಳೆಯದಲ್ಲ ಎಂಬುದು ತಿಳಿದಿಲ್ಲ. ವಿಶ್ವವು ದೇವರೇ ಆಗಿದೆ.

❖ ಸ್ವಲ್ಪವೇ ಸಮಯ ಧ್ಯಾನ ಮಾಡಿದ ನಂತರ ಕೂಡ, ನಾವು ಎಷ್ಟೊಂದು ಉಲ್ಲಸಿತರಾಗುತ್ತೇವೆ, ಪುನಃಶ್ಚೇತನಗೊಳ್ಳುತ್ತೇವೆ, ಜೀವನೋತ್ಸಾಹವನ್ನು ಹೊಂದುತ್ತೇವೆ. ಇದರ ಪ್ರಭಾವವನ್ನು ನಮ್ಮ ಮೂಲಕ ಕೆಲಸ ಮಾಡಲು ಅವಕಾಶ ನೀಡಿದರೆ ಯಾವುದೇ ನಕಾರಾತ್ಮಕತೆ ಇರುವುದಿಲ್ಲ. ನಾವು ಕೋಪಗೊಳ್ಳುವುದಿಲ್ಲ, ಅಸೂಯೆಗೊಳ್ಳುವುದಿಲ್ಲ.

–ಗುರೂಜಿ ಕೃಷ್ಣಾನಂದ



ಪುಣೆಯ ಶಾಲೆಯೊಂದರ ವಿದ್ಯಾರ್ಥಿಗಳು 2024ರ ಮಾರ್ಚ್ ತಿಂಗಳಲ್ಲಿ ನಡೆದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದರು.



ಅಹಮದಾಬಾದ್‌ನ ಶಾಲೆಯೊಂದರ ವಿದ್ಯಾರ್ಥಿಗಳು 2024ರ ಮಾರ್ಚ್ ತಿಂಗಳಲ್ಲಿ ನಡೆದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಲೈಟ್ ಚಾನಲ್ ಮಾಡಿದರು.



ಚೆನ್ನೈನಲ್ಲಿರುವ ಕ್ಯಾನ್ಸರ್ ರೋಗಿಗಳಿಗೆ 2024ರ ಮಾರ್ಚ್ ತಿಂಗಳಲ್ಲಿ ಒಂದು ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸಲಾಯಿತು.

# ಸಾಹಸೀ ದೇವತೆಗಳು – (ಬೆಳಕಿನ ಯೋಧರು)

ಮನೋಜ್ ಕುಮಾರ್ ಚೋಪ್ರಾ; ಅನು: ಕಾಂಚನಲತಾ

ಮಹಾತ್ಮ ಗಾಂಧಿಯವರ ಒಂದು ಉಲ್ಲೇಖ ನನ್ನ ನೆನಪಿಗೆ ಬರುತ್ತಿದೆ. **"ಇನ್ನೊಬ್ಬರಿಗೆ ಮಾಡುವ ಸೇವೆಯಲ್ಲಿ ನಿಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದೇ ನಿಮ್ಮನ್ನು ನೀವು ಕಂಡುಕೊಳ್ಳುವ ಒಂದು ಅತ್ಯುತ್ತಮವಾದ ಮಾರ್ಗ."** ಅಂತಹ ಗಹನವಾದ ಮಾತುಗಳು, ತಮ್ಮ ದೇಶ ಮತ್ತು ಅದರ ಜನತೆಯ ಸೇವೆಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟ ಮಹಾತ್ಮ ಗಾಂಧಿಯವರಂತಹ ಮಹಾನ್ ವ್ಯಕ್ತಿಯಿಂದ ಮಾತ್ರ ಬರಲು ಸಾಧ್ಯ. ಗುರೂಜಿ ಕೃಷ್ಣಾನಂದ, ಮಹರ್ಷಿ ಅಮರ ಹಾಗೂ ಇನ್ನೂ ಹಲವಾರು ಮಾಸ್ಟರ್‌ಗಳು ಕೂಡ ಇಡೀ ಸೃಷ್ಟಿಗಾಗಿ ನಿಸ್ವಾರ್ಥವಾಗಿ ಕೆಲಸ ಮಾಡಿದ್ದಾರೆ. ಅವರ ಕೆಲಸದ ಅಗಾಧತೆಯನ್ನು ನಾವು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಅವರ ಹಿರಿಮೆ ಮತ್ತು ತ್ಯಾಗಗಳು ನಮ್ಮ ಸೀಮಿತ ಬುದ್ಧಿವಂತಿಕೆಗೆ ಮೀರಿದುದಾಗಿವೆ.

ಗುರೂಜಿ ಕೃಷ್ಣಾನಂದರವರು ಮಹರ್ಷಿ ಅಮರರವರ ನೇರ ಶಿಷ್ಯರು. ಅಮರರವರ ಕೆಲಸವನ್ನು ಮುಂದುವರೆಸಲು ಗುರೂಜಿಯವರು ಧ್ಯಾನದ ತರಗತಿಗಳನ್ನು ಬೆಂಗಳೂರಿನಲ್ಲಿ 1988ರಲ್ಲಿ ಆರಂಭಿಸಿದರು. ಅವರು ಬೆಳಕಿನ ಚಾನಲ್‌ಗಳ ವಿಶ್ವ ಸಂಚಲನವನ್ನು ಮೇ 2008ರಲ್ಲಿ ಆರಂಭಿಸಿದರು. ನವಯುಗವನ್ನು ಈ ಭೂಮಿಯ ಮೇಲೆ ಸ್ಥಾಪಿಸುವುದು ಈ ಸಂಚಲನದ ಉದ್ದೇಶವಾಗಿದೆ. ಭೌತಿಕ ಮಟ್ಟದಲ್ಲಿ ಕಾರ್ಯ ನಿರ್ವಹಿಸಲು, ಗುರೂಜಿಯವರು ಲೈಟ್ ಚಾನೆಲಿಂಗ್ ಕಾರ್ಯಕರ್ತರ ಗುಂಪನ್ನು 2009ರಲ್ಲಿ ರಚಿಸಿದರು. ಆರಂಭದಲ್ಲಿ 15–20 ಕಾರ್ಯಕರ್ತರು ಈ ಕೆಲಸಕ್ಕೆ ಸೇರಿಕೊಂಡರು. ಗುರೂಜಿಯವರ ಸೂಚನೆಗಳಿಗನು–ಸಾರವಾಗಿ ಅವರು ಕೆಲಸ ಮಾಡಲು ಆರಂಭಿಸಿದರು. ಪ್ರತಿ ತಿಂಗಳು ಗುರೂಜಿಯವರೊಡನೆ ಒಂದು ಸಭೆ ಇರುತ್ತಿತ್ತು ಹಾಗೂ ಆ ಸಭೆಯಲ್ಲಿ ನಾವು ಕೆಲಸದ ಪ್ರಗತಿಯ ಕುರಿತು ವಿವರಿಸುತ್ತಿದ್ದೆವು. ಗುರೂಜಿಯವರು ತಮ್ಮ ಅಸಾಧಾರಣ ಪ್ರೀತಿಯಿಂದ ಈ ಗುಂಪನ್ನು ಚೈತನ್ಯಗೊಳಿಸಿದರು ಮತ್ತು ನೈಜವಾಗಿ ಶ್ಲಾಘಿಸುತ್ತಾ ಅವರಲ್ಲಿ ಆತ್ಮವಿಶ್ವಾಸ ತುಂಬಿದರು. ಆರಂಭದಲ್ಲಿ ಗೆಲುವು ಅಲ್ಪ ಪ್ರಮಾಣದಲ್ಲಿದ್ದರೂ, ಮುಂದಿನ ಕೆಲಸಕ್ಕೆ ಅದು ದಾರಿಗಳನ್ನು ತೋರಿಸಿತು. ಗುರೂಜಿಯವರ ಮಾರ್ಗದರ್ಶನದಲ್ಲಿ ಕೆಲಸವು ದೃಢವಾಗಿ ಬೆಳೆಯುತ್ತಿದೆ. ಈ ಚಿಕ್ಕ ಗುಂಪಿನ ಕಾರ್ಯಕರ್ತರು, ಅಷ್ಟು ಕಡಿಮೆ ಸಮಯದಲ್ಲಿ, ಈ ಬೃಹತ್ ಕಾರ್ಯದ ಆಧಾರಸ್ತಂಭ–ಗಳಾಗುತ್ತಾರೆ ಎಂದು ನಾವು ಎಂದೂ ಊಹಿಸಿರಲಿಲ್ಲ. ನಿಧಾನವಾಗಿ, ಕಾರ್ಯಕರ್ತರ ಸಂಖ್ಯೆಯು ನೂರಕ್ಕೆ ಏರಿತು.

ನಾವು ಒಂದು ಉನ್ನತ ಧ್ಯೇಯಕ್ಕಾಗಿ ಕೆಲಸ ಮಾಡುತ್ತಿರುವಾಗ, ಖಂಡಿತವಾಗಿ ನಮ್ಮ ಮೇಲೆ ನಮಗೇ ನಂಬಿಕೆ ಇರಬೇಕು ಎಂದು ನನಗನಿಸುತ್ತದೆ. ಅರೆ ಮನಸ್ಸಿನಿಂದ ಮಾಡುವ ಕೆಲಸವು ಬಯಸಿದ ಫಲಿತಾಂಶಗಳನ್ನು ನೀಡುವುದಿಲ್ಲ. ನಾವು ಬೆಟ್ಟವನ್ನು ಹತ್ತಬೇಕಾದರೆ, ಆ ಪ್ರಕ್ರಿಯೆಯಲ್ಲಿ ನಂಬಿಕೆಯಿಡಬೇಕು. ನಮ್ಮಲ್ಲಿ ದೃಢವಾದ ನಿರ್ಧಾರವಿರಬೇಕು. ನಾವು ತ್ಯಾಗಗಳನ್ನು ಮಾಡಲು ಮತ್ತು ಅಪಾಯಗಳನ್ನು ಎದುರಿಸಲು ಸಿದ್ಧರಾಗಿರಬೇಕು. ಕಾರ್ಯಕರ್ತರಾಗುವುದು ಒಂದು ಸೇವೆಯ ರೀತಿ ಮತ್ತು ಇತರರಿಗೆ ಸಹಾಯ ಮಾಡುವ ಅವಕಾಶ ಎಂದು ನಾನು ಭಾವಿಸುತ್ತೇನೆ. ಇದು ಸಮಾಜಕ್ಕೆ ಹಿಂದಿರುಗಿಸುವ ಒಂದು ವಿಧಾನವಾಗಿದೆ. ಇದೊಂದು ಸೇವೆ ಮತ್ತು ಇತರರಿಗೆ ಹಾಗೂ ತನಗೆ ತಾನೇ ಸಹಾಯ ಮಾಡಲು ಸಿಗುವ ಅವಕಾಶವಾಗಿದೆ. ಈ ಪ್ರಕ್ರಿಯೆಯಲ್ಲಿ ನಾವು ಹೆಚ್ಚು ಕಲಿಯುತ್ತೇವೆ ಹಾಗೂ ಬೆಳೆಯುತ್ತೇವೆ.

ಗುರೂಜಿಯವರು ನಮ್ಮ ಕಾರ್ಯಕರ್ತರನ್ನು **'ಸಾಹಸೀ ದೇವತೆಗಳು (Dare Angels)'** ಎಂದು ಕರೆಯುತ್ತಿದ್ದದ್ದು ನನಗೆ ನೆನಪಿದೆ. ಅವರ ಪ್ರಕಾರ ಸಾಹಸೀ ದೇವತೆಗಳು ಎಂದರೆ ನಿರ್ಭೀತಿಯಿಂದ ಉನ್ನತ ಮಟ್ಟದಲ್ಲಿ ಯೋಚಿಸುವವನು, ಯಾವುದೇ ಕಠಿಣ ಪರಿಸ್ಥಿತಿಯಲ್ಲೂ ಪರಿಶ್ರಮದಿಂದ ಕೆಲಸ ಮಾಡುವವನು ಹಾಗೂ ತ್ಯಾಗ ಮಾಡಲು ಸಿದ್ಧರಿರುವವನು. ಅವರು ಶ್ಲಾಘಿಸುವುದರಲ್ಲಿ ಅತೀ ಉದಾರಿಗಳಾಗಿದ್ದರೆಂದು ನನಗೆ ಅನಿಸುತ್ತದೆ. ನಾವು ಅವರ ಹೃದಯದಲ್ಲಿ ದೇವತೆಗಳಾಗಿದ್ದೆವು ಎಂದು ನನ್ನ ಭಾವನೆ.

ಕೆಲವೊಮ್ಮೆ, ನಮ್ಮ ಕಾರ್ಯಕರ್ತರು ಕಠಿಣ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಾರೆ. ಅವರು ತಮ್ಮ ವೈಯಕ್ತಿಕ ಸಮಯ ಮತ್ತು ಶಕ್ತಿಯನ್ನು ತ್ಯಾಗ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ, ನೂರಾರು ಕಿಲೋಮೀಟರ್‌ಗಳಷ್ಟು ದೂರ ಪ್ರಯಾಣ ಮಾಡಿ ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ನಡೆಸುತ್ತಾರೆ. ವಿಶ್ವ ಸಂಚಲನದ ದಿನಕ್ಕೆ ಹತ್ತಿರವಿದೆಯೆಂಬ ಕಾರಣಕ್ಕೆ, ಕಾರ್ಯಕರ್ತರೊಬ್ಬರು ತಮ್ಮ ಮಗಳ ಮದುವೆಯನ್ನು ಮುಂದೂಡಿದ್ದು ಮತ್ತು ಇನ್ನೊಬ್ಬ ಕಾರ್ಯಕರ್ತರು ತಮ್ಮ ಮನೆಯ ಗೃಹಪ್ರವೇಶದ ದಿನಾಂಕವನ್ನು ಬದಲಿಸಿದ್ದು ನನಗೆ ನೆನಪಿದೆ. ಅವರ ಬಹುತೇಕ ತ್ಯಾಗಗಳು ನಮಗೆ ತಿಳಿಯುವುದೇ ಇಲ್ಲ. ಈ ಕೆಲಸದ ಮೇಲೆ ಅವರಿಗಿರುವ ಒಲವು ಇಂದಿನ ಪ್ರಕ್ಷುಬ್ಧ ಜಗತ್ತಿಗೆ ಒಂದು ಭರವಸೆಯಾಗಿದೆ. 2024ರಲ್ಲಿ, ಅನೇಕ ಹಿರಿಯ ಕಾರ್ಯಕರ್ತರು ದೈಹಿಕವಾಗಿ ದುರ್ಬಲರಾಗಿದ್ದರು ಆದರೆ ಮಾನಸಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಹೆಚ್ಚು ಸಬಲರಾಗಿದ್ದರು. ಅವರು ಬೆಳಕಿನ ಯೋಧರು.

ಲೈಟ್ ಚಾನೆಲಿಂಗ್ ಕಾರ್ಯಕರ್ತರು, ನಮ್ಮ ಗುರೂಜಿಯವರ ಕನಸಾಗಿದ್ದ ನವಯುಗಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಜಗತ್ತಿನಾದ್ಯಂತ ಇರುವ ಲಕ್ಷಾಂತರ ಲೈಟ್ ಚಾನಲ್‌ಗಳ ಕೆಲಸವು ಮಾನವಕುಲಕ್ಕೆ ಒಂದು ಉಜ್ವಲ ಭವಿಷ್ಯವನ್ನು ಸೃಷ್ಟಿಸುತ್ತದೆ ಎಂದು ನನಗೆ ಖಾತ್ರಿಯಿದೆ. ■

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯ ಪ್ರಾರ್ಥನಾ ಸಮಯದಲ್ಲಿ ಅಥವಾ ಆನ್‌ಲೈನ್ ತರಗತಿಗಳ ಪ್ರಾರಂಭದಲ್ಲಿ ಅಥವಾ ಇನ್ನಾವುದೇ ಸಮಯದಲ್ಲಿ ಬೆಳಕನ್ನು ಪ್ರತಿನಿತ್ಯ 3 ರಿಂದ 7 ನಿಮಿಷಗಳ ಕಾಲ ಚಾನಲ್ ಮಾಡಿಸು–ವುದರ ಮೂಲಕ ಲೈಟ್‌ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5877 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 30.04 ಲಕ್ಷ |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಶಾಲೆಗಳು | : | 550 |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಮಕ್ಕಳು | : | 2.37 ಲಕ್ಷ |

ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



# ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ

ಶಾಲೆಯೊಂದರಲ್ಲಿ, ಮಕ್ಕಳು ಮತ್ತು ಶಿಕ್ಷಕರು ಲೈಟ್ ಚಾನಲ್ ಮಾಡುವಾಗ ಸ್ವಲ್ಪ ಸಮಯದಲ್ಲಿಯೇ ಬೇಷರತ್ತಾದ ಪ್ರೀತಿ ಮತ್ತು ಆಳವಾದ ಅನುಭವವನ್ನು ಪಡೆದುದರ ಬಗ್ಗೆ ಹಾಗೂ ಲೈಟ್ ಚಾನಲಿಂಗ್ ತಂತ್ರದ ಅತಿ ಸರಳತೆಯ ಬಗ್ಗೆ ಭಾವಪರವಶವಾದರು. ತಮ್ಮ ಕೃತಜ್ಞತೆ-ಯನ್ನು ಹಂಚಿಕೊಳ್ಳುವುದಕ್ಕಾಗಿ ಅವರು ಸಮಯವನ್ನು ನೀಡಿದರು. ಮತ್ತು ಆ ದಿನ ಒಬ್ಬ ವಿದ್ಯಾರ್ಥಿಯ ಹುಟ್ಟು-ಹಬ್ಬದ ಸಲುವಾಗಿ ಅವರು ವಿಶೇಷವಾದ ಹುಟ್ಟುಹಬ್ಬದ ಹಾಡನ್ನು ಹಾಕಿದರು. ಈ ಮೂಲಕ ಎಲ್ಲರ ಪರವಾಗಿ ನಾವು ಅಮರಜೀ ಅವರಿಗೆ ಹಾರೈಸುತ್ತಿರುವಂತೆ ಅನಿಸಿತು. ಇದಕ್ಕೆಲ್ಲ ನಾವು ಅಂದುಕೊಂಡಿದ್ದಕ್ಕಿಂತ ಹೆಚ್ಚು ಸಮಯ ಬೇಕಾಯಿತು. ಆದುದರಿಂದ ಉರಲಿ ಕಂಚನ್‌ನಲ್ಲಿದ್ದ ಮುಂದಿನ ಲೈಟ್ ಚಾನೆಲಿಂಗ್ ಸೆಷನ್‌ಗೆ ತಡವಾಯಿತು. ನಾವು ತಡವಾಗಿದ್ದಕ್ಕೆ ಶಿಕ್ಷಕರ ಮತ್ತು ಮಕ್ಕಳ ಬಳಿ ಕ್ಷಮೆ ಕೇಳಿದೆವು. ಆದರೂ ಸೆಷನ್ ತುಂಬಾ ಪ್ರಶಾಂತವಾಗಿತ್ತು ಮತ್ತು ಒಂದು ಪಕ್ಷಿಯು ಚಿಲಿಪಿಲಿಗುಟ್ಟುತ್ತಿರುವುದು ಕೇಳಿಸಿತು, ಅದು ಕೂಡ ಅಮರಜೀ ಅವರ ಹುಟ್ಟು ಹಬ್ಬದ ವಾರ್ಷಿಕೋತ್ಸವದ ವಿಶೇಷ ಆಚರಣೆಯಲ್ಲಿ ಭಾಗವಹಿಸುತ್ತಿರುವಂತೆ ಭಾಸವಾಯಿತು. ಶಿಕ್ಷಕರುಗಳಿಗೆ ತುಂಬಾ ತೃಪ್ತಿಯಾಯಿತು, ಮತ್ತು ಸೆಷನ್ ಎಲ್ಲರಿಗೂ ಇಷ್ಟವಾಯಿತೆಂದು ಹಾಗೂ ಅದರಿಂದ ಪ್ರಯೋಜನ-ವಾಯಿತೆಂದು ಹೇಳಿದರು. ಅಮರಜೀ, ಮಾಸ್ಟರ್ ವಿ, ಗುರೂಜಿ ಮತ್ತು ಇಡೀ ಮಾನಸ ಕುಟುಂಬಕ್ಕೆ ಕೃತಜ್ಞತೆಗಳು.

–ಲೈಟ್ ಚಾನೆಲ್ ಕಾರ್ಯಕರ್ತರು, ಪುಣೆ ಟೀಮ್

ಫೆಬ್ರವರಿ 1ರಂದು, ಬೆಳಗ್ಗೆ 5ಕ್ಕೆ ಸಂಗಮ್ನರ್‌ನಲ್ಲಿ ತುಂಬಾ ಚಳಿಯಾದ ಹವಾಮಾನವಿತ್ತು. ನಾನು ನನ್ನ 4-ಚಕ್ರದ ವಾಹನವನ್ನು ಸರ್ವಿಸ್‌ಗೆ ಕೊಟ್ಟದ್ದರಿಂದ, ಮೂರು ಶಾಲೆಗಳಲ್ಲಿ ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ಮಾಡಲು ದ್ವಿಚಕ್ರ ವಾಹನದಲ್ಲಿ ಪ್ರಯಾಣ ಮಾಡಬೇಕಾಯಿತು. ಹಾಗಾಗಿ, ಮಧ್ಯಾಹ್ನದ ಹೊತ್ತಿಗೆ ನನಗೆ ಸ್ವಲ್ಪ ಜ್ವರ ಬಂದಂತೆ ಇತ್ತು. ನೆಗಡಿಗೆ ಹಾಗೂ ಜ್ವರಕ್ಕೆ ನಾನು ಮಾತ್ರೆಗಳನ್ನು ತೆಗೆದುಕೊಂಡೆ. ಸಾಯಂಕಾಲ 4.30ರ ಸಮಯದಲ್ಲಿ ಸರ್ವಿಸ್ ಸೆಂಟರ್‌ನಿಂದ ಕಾರನ್ನು ತೆಗೆದುಕೊಂಡು ಸ್ವಿಚ್ ಆನ್ ಮಾಡಿದಾಗ, ನಮ್ಮ "ಅರ್ಪಣ" ಆಲ್ಬಮ್‌ನಿಂದ ಋಷಿಗಳ ಹಾಡು ನನ್ನ ಮೊಬೈಲ್ ಮೂಲಕ ಕಾರಿನ ಸೌಂಡ್ ವ್ಯವಸ್ಥೆಯಿಂದ ನನ್ನ ಪ್ರಯತ್ನವಿಲ್ಲದೆ ಪ್ರಸಾರವಾಗ ತೊಡಗಿತು. ನಾನು ಈ ಹಾಡನ್ನು ಕಳೆದ ಎರಡು ತಿಂಗಳಿಂದ ಕೇಳಿರಲಿಲ್ಲ, ಹಾಗಾಗಿ, ನನ್ನ ಮೊಬೈಲ್ ಸ್ಕ್ರೀನ್‌ನಲ್ಲಿ ಅದು ಸುಲಭವಾಗಿ ಸಿಗುವಂತಿರಲಿಲ್ಲ. ಆದರೆ ಆ ಹಾಡುಗಳನ್ನು ಕೇಳಿದ ನಂತರ ನನ್ನ ಆಯಾಸವೆಲ್ಲಾ ಮಾಯವಾಯಿತು ಹಾಗೂ ಸಾಯಂಕಾಲ 6.30ಕ್ಕೆ ಅಮೃತ್ ಮಾಡೆಲ್ ಸ್ಕೂಲಿನ ಹಾಸ್ಟಲ್ ವಿದ್ಯಾರ್ಥಿಗಳಿಗೆ ಸಂತೋಷದಿಂದ ಸೆಷನ್ ನಡೆಸಲು ಸಾಧ್ಯವಾಯಿತು.

–ಸಂತೋಷ್ ಕೋರೆ, ಲೈಟ್ ಚಾನೆಲ್ ಕಾರ್ಯಕರ್ತ

ವಿಶ್ವ ಚಾನೆಲ್ಸ್ ದಿನದಂದು, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ಼್ ಸೈನ್ಸ್ (IISC)ನಲ್ಲಿರುವ ಕೇಂದ್ರೀಯ ವಿದ್ಯಾಲಯದಲ್ಲಿ ಲೈಟ್ ಚಾನೆಲಿಂಗ್ ಸೆಷನ್ ಮಾಡುವುದಕ್ಕೆ ನನಗೆ ಅವಕಾಶ ದೊರೆಯಿತು. ಆ ಸೆಷನ್ ಅದ್ಭುತವಾಗಿತ್ತು. ಸೆಷನ್ ಮುಗಿದ ನಂತರ, 7ನೇ ತರಗತಿಯ ವಿದ್ಯಾರ್ಥಿಯೊಬ್ಬ ನನ್ನ ಹತ್ತಿರ ಬಂದು 8-10 ನಿಮಿಷಗಳ ಕಾಲ ಉತ್ಸುಕತೆಯಿಂದ ಮಾತನಾಡಿ ನನ್ನ ಮೊಬೈಲ್ ಸಂಖ್ಯೆಯನ್ನು ತೆಗೆದುಕೊಂಡನು. ಆಶ್ಚರ್ಯಕರವಾಗಿ, ನಂತರ ಲೈಟ್ ಚಾನೆಲಿಂಗ್‌ನ ಬಗ್ಗೆ ವಿವರಣೆಯನ್ನು ಕೇಳುವುದಕ್ಕೆ ಅವನ ಚಿಕ್ಕಮ್ಮನಿಂದ ನನಗೆ ಕರೆ ಬಂತು. ಶಾಲೆಗಳಲ್ಲಿ ಲೈಟ್ ಚಾನೆಲಿಂಗ್ ಸೆಷನ್‌ಗಳು ಗಮನಾರ್ಹವಾಗಿ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುತ್ತಿವೆ. ಬೆಳಕು ಅವರ ಮನೆಗಳಿಗೆ ಪ್ರವೇಶಿಸುತ್ತಿದೆ ಮತ್ತು ಸಮಾನ-ಮನಸ್ಸಿನ ಜನರಲ್ಲಿ ಅರಿವನ್ನು ಸೃಷ್ಟಿಸುತ್ತಿದೆ. ಹಾಗೂ, 11ನೇ ತರಗತಿಯ ಇನ್ನೊಬ್ಬ ವಿದ್ಯಾರ್ಥಿ ಸೆಷನ್ ತುಂಬಾ ಚೆನ್ನಾಗಿತ್ತೆಂದು ಹೇಳಿದನು. ಪರೀಕ್ಷೆಯ ಸಮಯದಲ್ಲಿ ವಿದ್ಯಾರ್ಥಿಗಳ ಒತ್ತಡವನ್ನು ಹೋಗಲಾಡಿಸಲು ಇಂತಹ ಸೆಷನ್‌ಗಳನ್ನು ನಡೆಸಬೇಕೆಂದು ಪಿ ಟಿ ಟೀಚರ್ ಹೇಳಿದರು.

–ಸುಧಾ ಸುರೇಶ್ ಬಾಬು, ಲೈಟ್ ಚಾನೆಲ್ ಕಾರ್ಯಕರ್ತೆ

ವಿಶ್ವ ಚಾನಲ್ಸ್ ದಿನದಂದು, ಸಾಯಂಕಾಲ 6 ಗಂಟೆಯ ಮಾರ್ಗದರ್ಶಿತ ಆನ್‌ಲೈನ್ ಸೆಷನ್‌ನಲ್ಲಿ ನನಗೆ ವಿಸ್ತರಣೆಯ ಮತ್ತು ಏಕತೆಯ ಅದ್ಭುತವಾದ ಅನುಭವವಾಯಿತು. ಇದು ಸೆಷನ್ ಶುರುವಾದ ಐದು ನಿಮಿಷದೊಳಗೆ ಸಂಭವಿಸಿತು.

–ನಂದಿತ ವಿಜಯನ್, ಲೈಟ್ ಚಾನೆಲ್

ನಾನು ಕಳೆದ ಇಪ್ಪತ್ತೈದು ವಾರಗಳಿಂದ ಪ್ರತಿ ದಿನ ಎರಡು ಬಾರಿ ಲೈಟ್ ಚಾನೆಲಿಂಗ್ ಅಭ್ಯಾಸ ಮಾಡುತ್ತಿದ್ದೇನೆ. ನಾನು ಶಾಂತಿ ಮತ್ತು ಸಮಾಧಾನದಿಂದಿರುತ್ತೇನೆ ಹಾಗೂ ನನ್ನ ಒತ್ತಡದ ಮಟ್ಟ ಕಡಿಮೆಯಾಗಿದೆ. ಈಗ ನಾನು ನನ್ನ ಸಾಮಾಜಿಕ ಮತ್ತು ಇತರೆ ಚಟುವಟಿಕೆಗಳಿಗೆ ಸ್ಪಷ್ಟತೆಯಿಂದ ಮತ್ತು ಹೆಚ್ಚಿದ ಚೈತನ್ಯದಿಂದ ಗಮನವನ್ನು ನೀಡಬಲ್ಲೆ.

–ಅಮರ್‌ನಾಥ್ ಪಿ ಕೆ, ಲೈಟ್ ಚಾನೆಲ್

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು-ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು-ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ